# IN THE COURT OF THE ADDL. SENIOR CIVIL JUDGE & JMFC., GUBBI
# OS – **40/2024**

Witness present and duly sworn on : 12.06.2025.

Cross Examination: by Counsel for Defendant No.6 to 10. :

ವಾದ ಪತ್ರದ ಪ್ಯಾರಾ ನಂ.8 ರಲ್ಲಿ ಸರ್ವೆ ನಂ.57 ರ ಮತ್ತು 85 ರ ದಿನಾಂಕಃ 22.03.1944 ಕ್ರಯಪತ್ರದ ಬಗ್ಗೆ 2024 ರಲ್ಲಿ ತಾಲ್ಲೂಕು ಕಛೇರಿಯಲ್ಲಿ ದಾಖಲೆಗಳನ್ನು ಪಡೆದಾಗ ತಿಳಿಯಿತು. 1944 ರಿಂದ ಇಲ್ಲಿಯವರೆಗೂ 6 ರಿಂದ 10 ನೇ ಪ್ರತಿವಾದಿಗಳಿಗೆ ಸದರಿ ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾವು 18 ಎಕರೆ 25 ಗುಂಟೆ ಜಮೀನಿನಲ್ಲಿ ಸ್ವಾಧೀನ ಇದ್ದೇವೆ. 18 ಎಕರೆ ಜಮೀನಿನ ಖಾತೆ ಪಹಣಿ ನಮ್ಮ ಹೆಸರಿನಲ್ಲಿ ಇರುವುದಿಲ್ಲ. ಸಾಕ್ಷಿ ಮುಂದುವರೆದು ಅವುಗಳನ್ನು ಬದದಲಾವಣೆ ಮಾಡಿಸಿದ್ದಾರೆ. 6 ರಿಂದ 10 ನೇಪ್ರತಿವಾದಿಗಳ ಹೆಸರಿಗೆ ಖಾತೆ ಪಹಣಿ ಬದಲಾವಣೆ ಆಗಿರುವ ವಿಷಯ ನನಗೆ 2024 ರಲ್ಲಿ ತಿಳಿಯಿತು. ಸದರಿ ಖಾತೆ ಪಹಣಿಯನ್ನು ನಾವು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಈ ದಾವೆಯನ್ನು ಸಲ್ಲಿಸಿರುತ್ತೇನೆ. ಸದರಿ ಪಹಣಿಗಳನ್ನು ನಾನು ಕಂದಾಯ ಅಧಿಕಾರಿಗಳ ಮುಂದೆ ಪ್ರಶ್ನಿಸಿರುವುದಿಲ್ಲ.

ನಾನು ಹಾಜರುಪಡಿಸಿರುವ ನಿಪಿ-10 ಮತ್ತು 11 ವಂಶವೃಕ್ಷದ ಪ್ರಕಾರ ದೊಡ್ಡಗಂಗಯ್ಯ ಮತ್ತು ಕೆಂಚಮ್ಮ ರವರಿಗೆ ಮಕ್ಕಳಿಲ್ಲದೆ ಹೊನ್ನಯ್ಯರವರೊಂದಿಗೆ ವಾಸ ಮಾಡುತ್ತಿದ್ದರು, ಪಾರ್ವತಮ್ಮ, ಹೊನ್ನಯ್ಯ ಹಾಗೂ ಶಿವಣ್ಣ ಭಾಗ ಮಾಡಿಕೊಂಡು ಬೇರೆ ಬೇರೆ ಇದ್ದರು ಎಂದರೆ ಸರಿಯಲ್ಲ. ನಿಪಿ-10 ರಲ್ಲಿ ಪಾರ್ವತಮ್ಮ ಗಂಡನ ಮನೆ ವಾಸ ಮತ್ತು ಶಿವಣ್ಣ ಬೇರೆ ವಾಸ ಎಂದು ತೋರಿಸಿದ್ದು ಅವುಗಳು ವಿಭಾಗ ಮಾಡಿರುವುದನ್ನು ತೋರಿಸುತ್ತದೆ ಎಂದರೆ ಸರ್ವೆ ನಂ.57, 85 ರಲ್ಲಿ ಸದರಿ ದೊಡ್ಡಗಂಗಯ್ಯ, ಪಾರ್ವತಮ್ಮ, ಹೊನ್ನಯ್ಯ ಮತ್ತು ಶಿವಣ್ಣ ರವರ ನಡುವೆ ಭಾಗ ಆಗಿರುತ್ತದೆ. ವಿಭಾಗ ಪತ್ರ ಇರುವುದಿಲ್ಲ. ಪಾರ್ವತಮ್ಮ ರವರಿಗೆ ಒಟ್ಟು ಕುಟುಂಬದ ಭಾಗದಿಂದ ಬಂದ ಆಸ್ತಿಗಳಲ್ಲಿ, ಆಕೆಯ ಮಕ್ಕಳಾದ ತಿಮ್ಮಯ್ಯ, ರೇವಣ ಸಿದ್ದಯ್ಯ ಮತ್ತೆ ದಾಸಪ್ಪರವರು ಭಾಗ ಮಾಡಿಕೊಂಡಿದ್ದಾರೆಂದರೆ ವಿಭಾಗ ಆಗಿಲ್ಲ. ಸಾಕ್ಷಿ

ಮುಂದುವರೆದು ಅವರೆಲ್ಲರೂ ಒಟ್ಟಿಗೆ ವ್ಯವಸಾಯ ಮಾಡುತ್ತಿದ್ದಾರೆ. ನಿಪಿ-10 ರಲ್ಲಿ ಪಾರ್ವತಮ್ಮನ ಮಕ್ಕಳು ಬೇರೆ ವಾಸ ಎಂದು ನಮೂದು ಮಾಡಿರುವುದು ಅವರ ನಡುವೆ ಭಾಗ ಆಗಿರುವುದನ್ನು ತೋರಿಸುತ್ತದೆ ಎಂದರೆ ಮದುವೆ ಆಗಿರುವ ಕಾರಣ ಹಾಗೆ ನಮೂದು ಮಾಡಿರುತ್ತೇವೆ. ಪಾರ್ವತಮ್ಮನ ಮಕ್ಕಳು ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಭಾಗದಲ್ಲಿ ಪಾರ್ವತಮ್ಮನ ಮಕ್ಕಳಿಗೂ ದಾವಾ ಆಸ್ತಿಗಳು ಬಂದಿಲ್ಲ ಎಂದರೆ ಸರಿಯಲ್ಲ. ಪಾರ್ವತಮ್ಮನವರ ಮಕ್ಕಳಿಗೆ ದಾವಾ ಆಸ್ತಿಗಳಲ್ಲಿ ಭಾಗ ಬಂದಿದೆ ಎಂದು ತೋರಿಸಲು ನಮ್ಮ ಹತ್ತಿರ ದಾಖಲೆ ಇರುವುದಿಲ್ಲ.

ಹೊನ್ನಯ್ಯನ ಮಕ್ಕಳಾದ ಶಿವಗಂಗಮ್ಮ/1 ನೇ ವಾದಿ, ಶಿವಂಗಯ್ಯ/2 ನೇ ವಾದಿ, ಬಸವರಾಜು/3 ನೇ ವಾದಿ, ಶಿವಕುಮಾರ್/4 ನೇ ವಾದಿ ಹಾಗೂ ಬಿ.ಹೆಚ್ ಗಂಗಾಧರ್/ 5 ನೇ ವಾದಿ ಭಾಗ ಮಾಡಿಕೊಂಡು ಬೇರೆ ಬೇರೆ ಇದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬೇರೆ ಬೇರೆ ಮನೆಗಳನ್ನು ಕಟ್ಟಿಕೊಂಡು ವಾಸ ಇದ್ದೇವೆ. ನಮ್ಮ ತಂದೆಯ ಮರಣದ ನಂತರ ಸುಮಾರು 10 ವರ್ಷಗಳ ಹಿಂದೆ ಬೇರೆ ಬೇರೆ ವಾಸ ಇದ್ದೇವೆ. ನಾವುಗಳು ಒಟ್ಟಿಗೆ ವ್ಯವಸಾಯ ಮಾಡಿ, ಬೆಳೆಗಳನ್ನು ಹಂಚಿಕೊಳ್ಳುತ್ತಿದ್ದೇವೆ ಆದರೆ ವಾಸ ಮಾತ್ರ ಬೇರೆ ಬೇರೆ ಇದ್ದೇವೆ. ನಾವುಗಳು ಸರ್ವೆ ನಂ.56, 57 ಮತ್ತು 85 ರಲ್ಲಿ ಬೆಳೆಗಳನ್ನು ಬೆಳೆಯುತ್ತಿದ್ದೇವೆ. ಸದರಿ ಜಮೀನುಗಳನ್ನು ಬಿಟ್ಟು ಬೇರೆ ಜಮೀನುಗಳು ಇರುವುದಿಲ್ಲ. ಸರ್ವೆ ನಂ.57 ರಲ್ಲಿ ಪಾರ್ವತಮ್ಮನವರು 8 ಎಕರೆ 33 ಗುಂಟೆಯಲ್ಲಿ ಸ್ವಾಧೀನ ಇದ್ದಾರೆ ಹಾಗೂ ಸರ್ವೆ ನಂ.85 ರಲ್ಲಿ 2 ಎಕರೆ 6 ಗುಂಟೆ ಜಮೀನಿನಲ್ಲಿ ಸ್ವಾಧೀನ ಇದ್ದಾರೆ. ನಾವು ಸರ್ವೆ ನಂ.57 ರಲ್ಲಿ 10 ಎಕರೆ 25 ಗುಂಟೆ ಜಮೀನಿನಲ್ಲಿ ಸ್ವಾಧೀನ ಇದ್ದೇವೆ. ನಾವು ಸರ್ವೆ ನಂ.85 ರಲ್ಲಿ ಇರುವುದಿಲ್ಲ, ಸದರಿ ಜಮೀನು ಪಾರ್ವತಮ್ಮನವರಿಗೆ ಹೋಗಿರುತ್ತದೆ.

ಸರ್ವೆನಂ.57 ರಲ್ಲಿ 10 ಎಕರೆ 25 ಗುಂಟೆ ದಾವಾ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆನಂ.57 ರ ಒಟ್ಟು ವಿಸ್ತೀರ್ಣ 18 ಎಕರೆ 25 ಗುಂಟೆ. ಅದರ ಬಾಬ್ತು ನಾವು 10 ಎಕರೆ 25 ಗುಂಟೆಯಲ್ಲಿ ಇದ್ದೇವೆ. ಉಳಿದ ಜಮೀನಿನಲ್ಲಿ 6 ರಿಂದ 10 ನೇ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸರ್ವೆನಂ.57 ರಲ್ಲಿ 8 ಎಕರೆ 33 ಗುಂಟೆ ಮತ್ತು ಸರ್ವೆನಂ.85 ರಲ್ಲಿ 2 ಎಕರೆ 6 ಗುಂಟೆ ಪಾರ್ವತಮ್ಮನವರಿಗೆ ಹೋಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಆಸ್ತಿಗಳು ಮೂಲತಹ ಬೆಣ್ಣೂರು ಗ್ರಾಮದ ಹೊನ್ನಗಂಗಯ್ಯರವರಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವುಗಳು ನನ್ನ ತಾತ ಮರಿಗಂಗಯ್ಯನವರ ಆಸ್ತಿ ಹಾಗೂ ಹೊನ್ನಗಂಗಯ್ಯ ಮತ್ತು ಮರಿಗಂಗಯ್ಯ ಬೇರೆ ಬೇರೆ ಕುಟುಂಬದವರು. ದಾವಾ ಆಸ್ತಿಗಳು ಸದರಿ ಹೊನ್ನಗಂಗಯ್ಯನವರ ಹಿಸ್ಸೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವುಗಳನ್ನು ತನ್ನ ತಾತ ಖರೀದಿ ಮಾಡಿದ್ದರು. ಹೊನ್ನಗಂಗಯ್ಯನವರು ಅವರ ಜೀವಿತ ಕಾಲದಲ್ಲಿ ಬೆಣಚಗೆರೆ ಗುರುಸಿದ್ದಪ್ಪನವರಿಗೆ ದಾವಾ ಆಸ್ತಿಗಳನ್ನು ಭೋಗ್ಯ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಭೋಗ್ಯವನ್ನು ತಿರುವಳಿ ಮಾಡಲು ಹಾಗೂ ಅವರ ಕುಟುಂಬದ ಅವಶ್ಯಕತೆಗೆ ಹೊನ್ನಗಂಗಯ್ಯನವರ ಹಿಸ್ಸೆಗೆ ಬಂದ ಆಸ್ತಿಗಳನ್ನು ತಿಮ್ಮಪ್ಪ ಮತ್ತು ಸಂಪಯ್ಯ ರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಮಾರಾಟದ ದಾಖಲೆಯು ದಿನಾಂಕಃ 22.03.1944 ರಂದು ಉಪನೊಂದಣಾಧಿಕಾರಿ ಕಛೇರಿಯಲ್ಲಿ ನೊಂದಣಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ತಿಮಯ್ಯ ಮತ್ತು ಸಂಪಯ್ಯ ರವರು ಸುಮಾರು 80 ವರ್ಷಗಳ ಹಿಂದೆ ದಾವಾ ಆಸ್ತಿಗಳನ್ನು ಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ತಿಮ್ಮಯ್ಯ ಹಾಗೂ ಸಂಪಯ್ಯ ಹಾಗೂ ನಂಜಪ್ಪನವರು ಭಾಗ ಮಾಡಿಕೊಂಡಾಗ, ಸದರಿ ಭಾಗದಲ್ಲಿ ಸರ್ವೆನಂ.57 ರ 8 ಎಕರೆ 33 ಗುಂಟೆಯಲ್ಲಿ ತಿಮ್ಮಪ್ಪ ರವರಿಗೆ 4 ಎಕರೆ 17 ಗುಂಟೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸಂಪಯ್ಯ ರವರಿಗೆ 4 ಎಕರೆ 16 ಗುಂಟೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆನಂ.85 ರಲ್ಲಿ ತಲಾ 1 ಎಕರೆ ತಿಮಯ್ಯ ಮತ್ತು ಸಂಪಯ್ಯ ರವರಿಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತಿಮ್ಮಪ್ಪನವರು ಬಹಳ ಹಿಂದೆ ಮರಣ ಹೊಂದಿದ್ದು, ಆತನು ಒಬ್ಬನೇ ಮಗ ಎ.ಟಿ ಮಹಾದೇವಯ್ಯ ಎಂದರೆ ನನಗೆ ಗೊತ್ತಿಲ್ಲ. ತಿಮ್ಮಪ್ಪನವರ ಮರಣದ ನಂತರ 6 ನೇ ಪ್ರತಿವಾದಿ ಎ.ಟಿ ಮಹಾದೇವಯ್ಯನವರು ಸರ್ವೆನಂ.57 ರಲ್ಲಿ 4 ಎಕರೆ 17 ಗುಂಟೆ ಹಾಗೂ ಸರ್ವೆನಂ.85 ರಲ್ಲಿ 1 ಎಕರೆ ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನುಗಳ ಖಾತೆ ಪಹಣಿ ಮೊದಲು ತಿಮ್ಮಪ್ಪನವರ ಹೆಸರಿಗೆ ಇದ್ದು, ಅವರ ಮರಣದ ನಂತರ 6 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನುಗಳಲ್ಲಿ ಅಡಿಕೆ ಮತ್ತು ತೆಂಗು ಬೆಳೆಸಿದ್ದಾರೆ ಹಾಗೂ ಅವುಗಳು ಸುಮಾರು 40 ವರ್ಷದ ಮರಗಳು ಎಂದರೆ ಸರಿಯಲ್ಲ. ಸದರಿ ಜಮೀನುಗಳಲ್ಲಿ ಕೊಳವೆ ಬಾವಿ ಮತ್ತು ಪಂಪಸೆಟ್ ಅಳವಡಿಸಿದ್ದಾರೆಂದರೆ ಸರಿಯಲ್ಲ. ಸದರಿ ಜಮೀನುಗಳಲ್ಲಿ ಅವರು ಅಡಿಕೆ ಎಲೆಯ ತಟ್ಟೆಗಳನ್ನು ಸರ್ಕಾರದ ಅನುಮತಿ ಮೇರೆಗೆ

ತಯಾರಿಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಜಮೀನುಗಳಲ್ಲಿ ಅವರು ಕೋಳಿ ಫಾರ್ಮ್ ಮಾಡಿದ್ದರು ಎಂದರೆ ಸರಿಯಲ್ಲ. ಅದಕ್ಕೆ ಸಂಭಂದಿಸಿದಂತೆ ಅವರು ಪಿ.ಎಲ್ ಡಿ ಬ್ಯಾಂಕಿನಲ್ಲಿ ಸಾಲ ಪಡೆದ್ದಿರು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನುಗಳಿಗೆ ಕಲ್ಲುಕಂಬಳನ್ನು ನಿಲ್ಲಿಸಿ ಮುಳ್ಳುತಂತಿ ಬೇಲಿ ಹಾಗೂ ಗೇಟ್ ಅಳವಡಿಸಿದ್ದಾರೆಂದರೆ ಸರಿಯಲ್ಲ. ಸರ್ವೆನಂ.57 ರಲ್ಲಿ 4 ಎಕರೆ 17 ಗುಂಟೆ ಮತ್ತು ಸರ್ವೆನಂ.85 ರಲ್ಲಿ 1 ಎಕರೆ ಜಮೀನುಗಳು ಸೇರಿಸಿ ಒಂದೇ ಚಕ್ಕುಬಂದಿ ಇದ್ದು, ಸದರಿ ಜಮೀನುಗಳ ಪೂರ್ವಕ್ಕೆ ಎ.ಟಿ. ಮಹಾದೇವಯ್ಯನವರ ಸರ್ವೆನಂ.55 ಎಂದರೆ ಸರಿಯಲ್ಲ, ಪಶ್ಚಿಮಕ್ಕೆ ಹೇಮಾವತಿ ಚಾನೆಲ್ ಎಂದರೆ ಸರಿಯಲ್ಲ. ಉತ್ತರಕ್ಕೆ 10 ನೇ ಪ್ರತಿವಾದಿ ಗಿರೀಶ್ ಕುಮಾರ್ ರವರ ಸರ್ವೆ ನಂ.85 ಎಂದರೆ ನನಗೆ ಗೊತ್ತಿಲ್ಲ ಮತ್ತು ದಕ್ಷಿಣಕ್ಕೆ 7 ನೇ ಪ್ರತಿವಾದಿ ಜಯಮ್ಮ, 9 ನೇ ಪ್ರತಿವಾದಿ ನಟರಾಜು ರವರ ಜಮೀನುಗಳು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಬಗ್ಗೆ ಆದ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ.

MR No.12/1983-84 ರಲ್ಲಿ 6 ನೇ ಪ್ರತಿವಾದಿ ಎ.ಟಿ. ಮಹಾದೇವಯ್ಯ ರವರ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. 1983-84 ರಿಂದ 6 ನೇ ಪ್ರತಿವಾದಿಯ ಹೆಸರಿಗೆ ಖಾತೆ ಪಹಣಿ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಅವರು ಕಂದಾಯ ಕಟ್ಟುತ್ತಿದ್ದು, ಕೊಳವೆಬಾವಿಗೆ ವಿದ್ಯುತ್ ಚಕ್ತಿ ಸಂಪರ್ಕ ಪಡೆದಿದ್ದಾರೆಂದರೆ ದೌರ್ಜನ್ಯದಿಂದ ಮಾಡಿರುತ್ತಾರೆ. ಅವರು ಪ್ರತಿ ತಿಂಗಳು ವಿದ್ಯುತ್ ಚಕ್ತಿ ಬಿಲ್ ನ್ನು ಪಾವತಿ ಮಾಡುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ.

ನಾನು ಹಾಜರುಪಡಿಸಿರುವ ನಿಪಿ-1 ರಲ್ಲಿ ಹೊನ್ನಗಂಗಯ್ಯ 6 ನೇ ಪ್ರತಿವಾದಿ ತಿಮ್ಮಪ್ಪ ಹಾಗೂ ಸಂಪಯ್ಯ ರವರು ಮಾರಾಟ ಮಾಡಿರುವ ನನ್ನ ಹಿಸ್ಸೆಯ ಜಮೀನು ಎಂದು ನಮೂದು ಮಾಡಿದ್ದಾರೆಂದರೆ ತಪ್ಪಾಗಿ ನಮೂದು ಮಾಡಿರುತ್ತಾರೆ. ಮರಿಗಂಗಯ್ಯನವರ ಅಣ್ಣ ತಮ್ಮಂದಿರು ಯಾರು ಎಂದರೆ ಹೊನ್ನಗಂಗಯ್ಯ. ಸಾಕ್ಷಿ ಮುಂದುವರೆದು ಹೊನ್ನಗಂಗಯ್ಯ ಬೇರೆ ಕಡೆ ಇದ್ದಾರೆ ಮತ್ತು ದಾವಾ ಆಸ್ತಿಗೆ ಸಂಭಂದಿಸಿರುವುದಿಲ್ಲ. ಮರಿಗಂಗಯ್ಯ ಮತ್ತು ಹೊನ್ನಗಂಗಯ್ಯ ಯಾವಾಗ ಭಾಗ ಮಾಡಿಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ಅವರಿಬ್ಬರ ನಡುವೆ ಸರ್ವೆನಂ.57 ರ 18 ಎಕರೆ 25 ಗುಂಟೆ ಭಾಗ ಆಗಿರುವ ವಿಷಯ ನನಗೆ ಗೊತ್ತಿಲ್ಲ. ಹೊನ್ನಗಂಗಯ್ಯ ನವರು ಯಾವ ಜಮೀನುಗಳಲ್ಲಿ ಸ್ವಾಧೀನ ಮತ್ತು ಉಳುಮೆ ಮಾಡುತ್ತಿದ್ದರು

ಎಂದರೆ ಅವರು ಬೆಣ್ಣೂರು ವಾಸ ಇದ್ದರು. ಸಾಕ್ಷಿ ಮುಂದುವರೆದು ಮರಿಗಂಗಯ್ಯನ ಮಕ್ಕಳು ಮತ್ತು ಮೊಮ್ಮಕ್ಕಳು ಬೆಣ್ಣೂರಿನಿಂದ ಕರೇಗೌಡನಹಳ್ಳಿಗೆ ಬಂದೆವು. ನಮ್ಮ ಮನೆ ಕರೆಗೌಡನಹಳ್ಳಿಯ ಸರ್ವೆನಂ.57 ರಲ್ಲಿ ಇದೆ. ದಾವಾ ಆಸ್ತಿಗಳು ಕರೆಗೌಡನಹಳ್ಳಿಯಲ್ಲಿ ಇವೆ.

ತಿಮ್ಮಯ್ಯ, ಸಂಪಯ್ಯ ಹಾಗೂ ಎ.ಟಿ ನಂಜಪ್ಪನವರು ಮಾಡಿಕೊಂಡ ಭಾಗದಲ್ಲಿ ಸರ್ವೆನಂ.57 ರ 8 ಎಕರೆ 33 ಗುಂಟೆಯಲ್ಲಿ 4 ಎಕರೆ 16 ಗುಂಟೆ ಮತ್ತು ಸರ್ವೆನಂ.85 ರಲ್ಲಿ 1 ಎಕರೆ ಸಂಪಯ್ಯನವರಿಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಂಪಯ್ಯ ರವರಿಗೆ ಶಿವನಂಜಪ್ಪ, ಚಂದ್ರಯ್ಯ, ಮಹಾಲಿಂಗಯ್ಯ ಮತ್ತು ಪಂಚಾಕ್ಷರ ಎಂಬ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಅವರುಗಳು ಸಂಪಯ್ಯನವರ ಭಾಗಕ್ಕೆ ಬಂದಿದ್ದ ಜಮೀನುಗಳನ್ನು ಭಾಗ ಮಾಡಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ಸರ್ವೆನಂ.57 ರಲ್ಲಿ 30 ಗುಂಟೆ ಶಿವನಂಜಪ್ಪನವರಿಗೆ, 1 ಎಕರೆ 33 ಗುಂಟೆ ಮಹಾಲಿಂಗಯ್ಯನವರಿಗೆ, 1 ಎಕರೆ 33 ಗುಂಟೆ ಪಂಚಾಕ್ಷರಯ್ಯನವರಿಗೆ ಹಾಗೂ ಚಂದ್ರಯ್ಯನವರಿಗೆ ಯಾವುದೇ ಭಾಗ ಪಡೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಶಿವನಂಜಪ್ಪನವರ ಮರಣದ ನಂತರ 30 ಗುಂಟೆ ಜಮೀನು 7 ನೇ ಪ್ರತಿವಾದಿ ಜಯಮ್ಮ ರವರಿಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಶಿವನಂಜಪ್ಪನವರ ಹೆಸರಿಗೆ ಸರ್ವೆನಂ.57 ರ ಖಾತೆ ಪಹಣಿ ಪೌತಿ ಆಧಾರದ ಮೇಲೆ ಜಯಮ್ಮ ರವರ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 30 ಗುಂಟೆಯ ಚಕ್ಕುಬಂದಿ ಪೂರ್ವಕ್ಕೆ 9 ನೇ ಪ್ರತಿವಾದಿ ನಟರಾಜು, 8 ನೇ ಪ್ರತಿವಾದಿ ಪಾಲಕ್ಷಮ್ಮನವರ ಜಮೀನು, ಪಶ್ಚಿಮಕ್ಕೆ ಹೇಮಾವತಿ ಚಾನೆಲ್, ಉತ್ತರಕ್ಕೆ 6 ನೇ ಪ್ರತಿವಾದಿ ಎ.ಟಿ. ಮಹಾದೇವಯ್ಯನವರ ಜಮೀನು ಮತ್ತು ದಕ್ಷಿಣಕ್ಕೆ ಶಿವಗಂಗಯ್ಯರವರ ಜಮೀನು ಎಂದರೆ ನನಗೆ ಗೊತ್ತಿಲ್ಲ. ಶಿವನಂಜಪ್ಪ ಹಾಗೂ ಆತನ ಮರಣದ ನಂತರ ಜಯಮ್ಮ ರವರು 30 ಗುಂಟೆ ಜಮೀನಿನ ಉಳುಮೆ ಮಾಡಿಕೊಂಡು ಬಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಹಾಲಿಂಗಯ್ಯನವರು ಸುಮಾರು 21 ವರ್ಷಗಳ ಹಿಂದೆ ಮರಣ ಹೊಂದಿದ್ದಾರೆಂದರೆ ನನಗೆ ಗೊತ್ತಿಲ್ಲ. ಆತನ ಹೆಂಡತಿ ಅಂಬಿಕಮ್ಮ ಹಾಗೂ ಮಕ್ಕಳಾದ ನಟರಾಜ/9 ನೇಪ್ರತಿವಾದಿ ಮತ್ತು ಮಹೇಶ್ ಮಹಾಲಿಂಗಯ್ಯನವರ ವಾರಸುದಾರರು ಎಂದರೆ ನನಗೆ ಗೊತ್ತಿಲ್ಲ. ಮಹಾಲಿಂಗಯ್ಯನವರ ಹೆಸರಿಗೆ ಖಾತೆ ಪಹಣಿ ಬರುತ್ತಿತ್ತು ಅವರ ಮರಣದ ನಂತರ ಸದರಿ ದಾಖಲೆಗಳು ಅಂಬಿಕಮ್ಮ ರವರ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಅಂಬಿಕಮ್ಮ ರವರ ಸರ್ವೆನಂ.57 ರಲ್ಲಿ 1

ಎಕರೆ 33 ಗುಂಟೆ ಜಮೀನನ್ನು ದಿನಾಂಕಃ 01.09.2021 ರಂದು ರೀಲಿಸ್ ದಾಖಲೆಯ ಅಡಿಯಲ್ಲಿ ನಟರಾಜು ರವರಿಗೆ ಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ನಟರಾಜು ರವರು ಸದರಿ ಆಸ್ತಿಯ ಸ್ವಾಧೀನದಲ್ಲಿ ಇದ್ದು, ಕಂದಾಯ ಕಟ್ಟುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ. ಅಂಬಿಕಮ್ಮ ರವರು ಆಸ್ತಿಯಲ್ಲಿ ಸದರಿ ಜಮೀನನ್ನು ಭೋಗ್ಯ ಮಾಡಿ SBM ನಿಂದ ಸಾಲ ಪಡೆದಿದ್ದಾರೆಂದರೆ ನನಗೆ ಗೊತ್ತಿಲ್ಲ. 9 ನೇ ಪ್ರತಿವಾದಿ ಸದರಿ ಜಮೀನಿನಲ್ಲಿ ಕೊಳವೆ ಬಾವಿ, ಪಂಪಸೆಟ್ ಹಾಗೂ ವಿದ್ಯುತ್ ಚಕ್ತಿ ಸಂಪರ್ಕ ಪಡೆದಿದ್ದಾರೆಂದರೆ ನಾವು ಮಾಡಿಸಿದ್ದೇವೆ. ಅವರು ತೆಂಗು ಅಡಿಕೆ ಬೆಳೆ ಬೆಳೆದಿದ್ದಾರೆಂದರೆ ನಾವು ಹಾಕಿದ್ದೇವೆ. 9 ನೇ ಪ್ರತಿವಾದಿ ಸದರಿ ಜಮೀನಿಗೆ ಕಲ್ಲು ಕಂಬ, ಮುಳ್ಳು ತಂತಿ ಬೇಲಿ ಹಾಕಿದ್ದಾರೆಂದರೆ ನಾವು ಹಾಕಿದ್ದೇವೆ. ಸದರಿ ಜಮೀನಿನ ಪೂರ್ವಕ್ಕೆ ಎ.ಟಿ ಮಹಾಲಿಂಗಯ್ಯನವರ ಸರ್ವೆ ನಂ.55/3 ಎ, ಎಂದರೆ ಸರಿಯಲ್ಲ, ಪಶ್ಚಿಮಕ್ಕೆ ಜಯಮ್ಮ ರವರ 30 ಗುಂಟೆ ಜಮೀನು ಎಂದರೆ ನನಗೆ ಗೊತ್ತಿಲ್ಲ, ಉತ್ತರಕ್ಕೆ ಎ.ಟಿ ಮಹಾಲಿಂಗಯ್ಯನವರ ಜಮೀನು ಎಂದರೆ ಸರಿಯಲ್ಲ, ದಕ್ಷಿಣಕ್ಕೆ ಪಾಲಕ್ಷಮ್ಮ ನವರ ಜಮೀನು ಎಂದರೆ ನನಗೆ ಗೊತ್ತಿಲ್ಲ. ನಾವು ತಂತಿ ಬೇಲಿ ಹಾಕಿರುವುದಕ್ಕೂ ಹಾಗೂ ಕೊಳಬೆ ಬಾವಿ ತೆಗೆಸಿರುವುದಕ್ಕೆ ದಾಖಲೆ ಇರುವುದಿಲ್ಲ. ನಾವೇ ಹಾಕಿರುತ್ತೇವೆ. ತಂತಿಬೇಲಿಗಳನ್ನು ಚುಂಚನಗಿರಿ ಯಲ್ಲಿ ಖರೀದಿ ಮಾಡಿದ್ದು ಸ್ಥಳಕ್ಕೆ ತಂದಿರುತ್ತೇವೆ. ಅದನ್ನು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. 25 ವರ್ಷಗಳ ಹಿಂದೆ ತಂತಿ ಬೇಲಿ ಹಾಕಿಸಿರುತ್ತೇವೆ. ನಾವು ಯಾವುದೇ ತಂತಿ ಬೇಲಿ ಹಾಕಿಸಿಲ್ಲ ಹಾಗೂ ಕೊಳವೆಬಾವಿ ಕೊರೆಸಿಲ್ಲ ಮತ್ತು ಸರ್ವೆ ನಂ.57 ರಲ್ಲಿ 1 ಎಕರೆ 33 ಗುಂಟೆ ಜಮೀನು 9 ನೇ ಪ್ರತಿವಾದಿ ನಟರಾಜು ರವರಿಗೆ ಸೇರಿದ ಜಮೀನು ಎಂದರೆ ನನಗೆ ಗೊತ್ತಿಲ್ಲ.

(Further cross examination deferred at the request of counsel for the defendant No.6 to 10)

(Typed to my dictation in open court)

R.O.I & A.C.

Addl. Senior Civil Judge and

JMFC., Gubbi